ಜಿಲ್ಲಾ ಪರಿಷತ್ ಶಾಲೆಗಳ ಅನುದಾನ ಕುರಿತು.

2228 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1987-88ರಲ್ಲಿ ಜಿಲ್ಲಾ ಪರಿಷತ್ತಿನಿಂದ ಮಂಜೂರಾದ ಪ್ರೌಢಶಾಲೆಗಳೆಷ್ಟು;*

ಆ) *ಜಿಲ್ಲಾ ಪರಿಷತ್ತಿನಿಂದ ಅನುದಾನ ಸಹಿತವಾಗಿ ಮಂಜೂರಾತಿ ಹೊಂದಿದೆ ಈ ಪ್ರೌಢ ಶಾಲೆಗಳನ್ನು ಅನುದಾನ ಸಂಹಿತೆಯಲ್ಲಿ ಸೇರಿಸಲು ಸರಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು?*

ಇ) *ಈಗಿನ ಜಿಲ್ಲಾ ಪಂಚಾಯತಿಯಲ್ಲಿ ಕೂಡ ಸದರಿ 27 ಪ್ರೌಢ ಶಾಲೆಗಳನ್ನು ಅನುದಾನ ಸಂಹಿತೆಯಲ್ಲಿ ಸೇರಿಸುವ ಸಲುವಾಗಿ ಶಿಫಾರಸ್ಸು ಮಾಡಿದೆಯೇ, ಹಾಗಿದ್ದಲ್ಲಿ ಸರಕಾರ ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದೆ.*

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 9.

ಆ) ಸರ್ಕಾರಿ ಆದೇಶ ಸಂಖ್ಯೆ ಇಡಿ 252 ಎಸಇಡಿ 92 ದಿನಾಂಕ 7.4.94ರ ಪ್ರಕಾರ 1987-88ರ ನಂತರ ಪ್ರಾರಂಭವಾದ ಪ್ರಾಥಮಿಕ: ಪ್ರೌಢ ಮತ್ತು ಸಂಯುಕ್ತ ಪದವಿ ಪೂರ್ಣ ಕಾಲೇಜುಗಳು ಶಾಶ್ವತ ಅನುದಾನ ರಹಿತ ಶಾಲಾ:ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ನಿಯಮಾನುಸಾರ ಅವಕಾಶ ಇರುವುದಿಲ್ಲ.

ಇ) ಮಾಡಿದೆ. (ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ).

ಸ್ನಾತಕೋತ್ತರ ಕೇಂದ್ರಗಳು

2230 - ಶ್ರೀ ಬಿ.ಬಿ.ಚಿಮ್ಮನಹಳ್ಳಿ (ಬಾದಾಮಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು, ಕರ್ನಾಟಕ ಬೆಂಗಳೂರು, ಗುಲ್ಬರ್ಗಾ ಮತ್ತು ಕುವೆಂಪು ಈ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಸ್ನಾತಕೋತ್ತರ ಕೇಂದ್ರಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಈ ಸ್ನಾತಕೋತ್ತರ ಕೇಂದ್ರಗಳಲ್ಲಿ ಯಾವ ಯಾವ ವಿಷಯಗಳ ಬೋಧನೆ ನೀಡಲಾಗುತ್ತದೆ?*

ಆ) *1995-96 ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರಗಳನ್ನು ತೆರೆಯಲು ಸರ್ಕಾರ ಈಗಾಗಲೇ ನಿರ್ಣಯ ಕೈಗೊಳ್ಳಲಾಗಿದೆಯೇ. ಹಾಗಿದ್ದಲ್ಲಿ ಆಯಾ ಕೇಂದ್ರಗಳಲ್ಲಿ ಯಾವ ವಿಷಯಗಳ ಬೋಧನೆಗೆ ಅವಕಾಶ ಕಲ್ಪಿಸಲು ಸರ್ಕಾರ ಇಚ್ಛಿಸಿದೆ?*

ಇ) *ಹೊಸದಾಗಿ ಸ್ಥಾಪಿಸಬೇಕೆಂದಿರುವ ಪ್ರತಿಯೊಂದು ಸ್ನಾತಕೋತ್ತರ ಕೇಂದ್ರದ ಬೋಧಕ ಬೋಧಕೇತರ ಸಿಬ್ಬಂದಿ ವೇತನ ಇನ್ನಿತರ ಅಗತ್ಯ ಕ್ರಮಗಳಿಗಾಗಿ ಎಷ್ಟು ಹಣ ವಿನಿಯೋಗಿಸಬೇಕಾಗುತ್ತದೆ. ಈ ಕೇಂದ್ರಗಳಲ್ಲಿ ಯಾವ ಯಾವ ವೇತನ ಶ್ರೇಣಿಯ ಹುದ್ದೆಗಳಿರುವುವು ?*

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) **ಮೈಸೂರು ವಿಶ್ವವಿದ್ಯಾಲಯ :**

ಹಾಸನ :
1) ಎಂಎ (ಕನ್ನಡ)
2) ಎಂಕಾಂ.
3) ಎಂಎಸ್ಸಿ (ಎಲೆಕ್ಟ್ರಾನಿಕ್ಸ್)
4) ಎಂಎ (ಇಂಗ್ಲೀಷ್)
5) ಎಂಎಸ್ಸಿ (ಬೈಯೋಸೈನ್ಸ್)

ಮಂಡ್ಯ :
1) ಎಂಎ (ಕನ್ನಡ)
2) ಎಂಎ (ಇಂಗ್ಲೀಷ್)
3) ಎಂಎ (ಅರ್ಥಶಾಸ್ತ್ರ)
4) ಎಂಎಸ್ಸಿ (ಸಕ್ಕರೆ ತಂತ್ರಜ್ಞಾನ)
5) ಎಂಎಸ್ಸಿ (ಪಾಲಿಮಾರ್ ವಿಜ್ಞಾನ)
6) ಎಂಎಸ್ಸಿ (ಸಂಖ್ಯಾಶಾಸ್ತ್ರ)

ಕರ್ನಾಟಕ ವಿಶ್ವವಿದ್ಯಾಲಯ

ಬೆಳಗಾಂ :
1) ಎಂಎ (ಕನ್ನಡ)
2) ಎಂಎ (ಸಮಾಜಶಾಸ್ತ್ರ)
3) ಎಂಎ (ಮರಾಠಿ)
4) ಎಂಎಸ್ಸಿ (ಗಣಿತ)
5) ಎಂಎ (ಅರ್ಥಶಾಸ್ತ್ರ)
6) ಎಂಕಾಂ.
7) ಎಂಎ (ಭೂಗೋಳ ಶಾಸ್ತ್ರ)

ಬಿಜಾಪುರ : 1) ಕಲೆ ಇತಿಹಾಸದಲ್ಲಿ ಸ್ನಾತಕೋತ್ತರ ಡಿಪ್ಲೋಮಾ.

2) ಪ್ರವಾಸೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮೋ.

ಕಾರವಾರ : 1) ಎಂಎಸ್ಸಿ (ಕಡಲ ಜೀವಶಾಸ್ತ್ರ)

2) ಎಂಎಸ್ಸಿ (ಅಕ್ವಾಕಲ್ಚರ್ ಅಂಡ್ ಇಂಡಸ್ಟ್ರಿಯಲ್ ಫಿಶರೀಶ್)

ಬೆಂಗಳೂರು ವಿಶ್ವವಿದ್ಯಾಲಯ

ತುಮಕೂರು: 1) ಎಂಎ (ಕನ್ನಡ)

2) ಎಂಎ (ಇತಿಹಾಸ)

3) ಎಂಎಸ್ಸಿ (ಗಣಿತ)

4) ಎಂ.ಕಾಂ.

ಕೋಲಾರ :- 1) ಎಂಎಸ್ಸಿ (ಸಸ್ಯಶಾಸ್ತ್ರ)

2) ಎಂಎ (ಕನ್ನಡ)

3) ಎಂ.ಕಾಂ.

4) ಎಂಎ (ಅರ್ಥಶಾಸ್ತ್ರ)

ಗುಲ್ಬರ್ಗಾ ವಿಶ್ವವಿದ್ಯಾಲಯ

ಸಂಡೂರು : 1) ಎಂಎಸ್ಸಿ (ಭೂಗರ್ಭ ಶಾಸ್ತ್ರ)

2) ಎಂಎ (ಕನ್ನಡ)

3) ಎಂ.ಕಾ.

4) ಮಿನರಲ್ ಎಕ್ಸಪ್ಲೋರೇಷನ್

5) ಮಿನರಲ್ ಪ್ರೊಸೆಸ್ಸಿಂಗ್.

6) ಮೆಡಿಸಿನಲ್ ಪ್ಲಾಂಟ್.

7) ಎಂಎಸ್ಸಿ (ಗಣಿತ)

ಬಳ್ಳಾರಿ : 1) ಎಂ.ಬಿ.ಎ.

2) ಇಂಡಸ್ಟ್ರಿಯಲ್ ಕೆಮಿಸ್ಟ್ರಿ

ರಾಯಚೂರು: 1) ಎಂಎ (ಕನ್ನಡ)

2) ಎಂಎಸ್ಸಿ (ಎನಸ್ಟುರಮೆಂಟೇಷನ್ ಟೆಕ್ನಾಲಜಿ)

ಕುವೆಂಪು ವಿಶ್ವವಿದ್ಯಾಲಯ

ದಾವಣಗೆರೆ : 1) ಎಂಎಸ್ಸಿ (ಸಂಖ್ಯಾಶಾಸ್ತ್ರ)
2) ಎಂಬಿಎ
3) ಎಂ.ಕಾಂ.
4) ಎಂಎ(ಅರ್ಥಶಾಸ್ತ್ರ)
5) ಎಂಎಸ್ಸಿ(ಸೂಕ್ಷ್ಮ ಜೀವಶಾಸ್ತ್ರ)
6) ಎಂಎಸ್ಸಿ (ಜೀವ ರಸಾಯನಶಾಸ್ತ್ರ)

ತುಮಕೂರು: 1) ಎಂಎ (ಕನ್ನಡ)
2) ಎಂಎ (ಇತಿಹಾಸ)
3) ಎಂಎಸ್ಸಿ (ಗಣಿತ)
4) ಎಂ.ಕಾಂ.

ಕೋಲಾರ: 1) ಎಂಎಸ್ಸಿ (ಸಸ್ಯಶಾಸ್ತ್ರ)
2) ಎಂಎ (ಕನ್ನಡ)
3) ಎಂಎ (ಅರ್ಥಶಾಸ್ತ್ರ)
4) ಎಂ.ಕಾಂ.

ಇ) 60.50 ಲಕ್ಷ ರೂಪಾಯಿಗಳು.

ಸೃಜಿಸಲು ಪ್ರಸ್ತಾಪಿಸಿರುವ ಹುದ್ದೆಗಳು.

	ಭೋಧಕ ವರ್ಗ			*ವೇತನ ಶ್ರೇಣಿ* (ರೂ. ಗಳಲ್ಲಿ)
1)	ಪ್ರಾಧ್ಯಾಪಕರು	-	6	4500 - 7300
2)	ಪ್ರವಚಕರು	-	6	3700 - 5700
3)	ಉಪನ್ಯಾಸಕರು	-	12	2200 - 4000
ಬೋಧಕೇತರ ವರ್ಗ				
1)	ಅಧೀಕ್ಷಕರು	-	2	2050 - 3950
2)	ಪ್ರಥಮ ದರ್ಜೆ-ಸಹಾಯಕರು	-	2	1280 - 2375
3)	ಎರಡನೇ ದರ್ಜೆ-ಸಹಾಯಕರು	-	2	1040-1900
4)	ಟೈಪಿಂಗರ್	-	2	870-1520

4)	ಜವಾನರು	-	4	840-1340
5)	ಸ್ವೀಪರ್	-	2	840-1340

ಅರಣ್ಯ ಭೂಮಿಯಲ್ಲಿ ಗ್ರಾನೈಟ್ ಕಲ್ಲುಗಳ ಬಗ್ಗೆ

2233 - ಶ್ರೀ ಪಿ.ಎನ್. ಜೈವಂತ್ (ಶಿರ್ಶಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಶಿರ್ಶಿ-ಸಿದ್ದಾಪುರ ತಾಲ್ಲೂಕಿನಲ್ಲಿ ಅರಣ್ಯ ಭೂಮಿಯಲ್ಲಿ ಲೆಟಗ್ಯಾಟ್ ಕಲ್ಲು ಹಾಗೂ ಗ್ರಾನೈಟ್ ಕಲ್ಲು ಸಾಮಾಗ್ರಿಗಳನ್ನು ಎಷ್ಟು ಬರಾಸು ತೆಗೆಯುತ್ತಾರೆ.

ಆ) ಕಳೆದ ಐದು ವರ್ಷಗಳಿಂದ ಬಂದ ವರ್ಷವಾರು ಆದಾಯವೆಷ್ಟು?

ಇ) ಗುತ್ತಿಗೆದಾರರಿಗೆ ಲೈಸೆನ್ಸ್ ಕೊಟ್ಟಿದ್ದರೆ ಎಷ್ಟು ಜನರಿಗೆ?

ಈ) ಸದ್ಯ ಕಲ್ಲು ತೆಗೆಯುವವರನ್ನು ಸ್ಥಗಿತಗೊಳಿಸಲಾಗಿದೆಯೇ?

ಉ) ಸಾವಿರಾರು ಕೂಲಿಕಾರರು ಕೆಲಸವಿಲ್ಲದೇ ತೊಂದರೆಯಲ್ಲಿ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ.

ಊ) ಗುತ್ತಿಗೆದಾರರೊಂದಿಗೆ ಶಾಮೀಲಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಹೆಚ್. ವೈ ಮೇಟಿ (ಅರಣ್ಯ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಯ ಶಿರಸಿ ಸಿದ್ದಾಪುರ ತಾಲ್ಲೂಕಿನಲ್ಲಿ ಅರಣ್ಯ ಭೂಮಿಯಲ್ಲಿ ಕಳೆದ 5 ವರ್ಷಗಳಿಂದ ಒಟ್ಟು 1850 ಭರಸು ಗ್ರಾನೈಟ್ ಇತ್ಯಾದಿ ಕಲ್ಲುಗಳನ್ನು ತೆಗೆದಿರುತ್ತಾರೆ.

ಆ)	ಸಾಲುಗಳು	ಸಂಖ್ಯೆ	ನೀಡಿದ ಲೈಸೆನ್ಸ್,	ಬಂದ ಆದಾಯ (ರೂ.)
1)	1991-92		31	22,630.00
2)	1992-93		9	7,577.00
3)	1993-94		10	12,551.00
4)	1994-95		5	5,829.00
5)	1995-96		1	1,361.00

ಇ) ಕಳೆದ ಐದು ವರ್ಷಗಳಿಂದ ಒಟ್ಟು 56 ಜನರಿಗೆ ಲೈಸೆನ್ಸ್ ನೀಡಲಾಗಿದೆ.

ಈ) ಹೌದು. ಅರಣ್ಯ ಜಮೀನಿನಲ್ಲಿ ಕಲ್ಲು, ಮರಳು ಇತ್ಯಾದಿ ತೆಗೆಯಲು ಹಾಗೂ ಸಾಗಾಣಿಕೆ ಮಾಡಲು ಜಾರಿಯಲ್ಲಿರುವ ನಿಯಮಾವಳಿ ಪ್ರಕಾರ (ಕರ್ನಾಟ ಸಣ್ಣ ಖನಿಜ ರಿಯಾಯಿತಿ) ಅನುಮತಿ ಕೊಡುವುದನ್ನು ಸ್ಥಗಿತಗೊಳಿಸಲಾಗಿದೆ.

ಉ) ಹೌದು.

ಊ) ಅನುಮತಿ ಪಡೆಯದೇ ಅರಣ್ಯ ಜಮೀನಿಲ್ಲಿ ಕಲ್ಲು ತೆಗೆದಲ್ಲಿ ಕಾನೂನು ಪ್ರಕಾರ ಗುನ್ನೆ ದಾಖಲು ಮಾಡಲಾಗಿದೆ. ಅಧಿಕಾರಿಗಳು ಷಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಸುರತ್ಕಲ್ ಕ್ಷೇತ್ರದ ಕಾಟಿಪಾಳ್ಯದಲ್ಲಿನ ಸರ್ಕಾರಿ ಆರೋಗ್ಯ ಕೇಂದ್ರದ ಬಗ್ಗೆ.

2236 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ಕ್ಷೇತ್ರದ ಕಾಟಿಪಾಳ್ಯದಲ್ಲಿ ಸರ್ಕಾರಿ ಆರೋಗ್ಯ ಕೇಂದ್ರ ನಿರ್ಮಾಣವಾಗಿ ಎಷ್ಟು ವರ್ಷಗಳಾದವು? ಈ ಕಟ್ಟಡಕ್ಕೆ ಮಾಡಲಾದ ಒಟ್ಟು ವೆಚ್ಚ ಎಷ್ಟು?

ಆ) ಈ ಆಸ್ಪತ್ರೆಗೆ ಮಂಜೂರಾದ ಒಟ್ಟು ವಿವಿಧ ವರ್ಗದ ಸಿಬ್ಬಂದಿಗಳು ಎಷ್ಟು, ಅದರಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳು ಎಷ್ಟು, ಖಾಲಿ ಇದ್ದಲ್ಲಿ ಯಾವಾಗ ಭರ್ತಿ ಮಾಡಲಾಗುವುದು?

ಇ) ಪೂರ್ಣಾವಧಿಯ ವೈದ್ಯರು ಇಲ್ಲಿ ಕೆಲಸ ನಿರ್ವಹಿಸುತ್ತಿರುವರೇ, ಇಲ್ಲವಾದಲ್ಲಿ ಅಲ್ಲಿಗೆ ಪೂರ್ಣಾವಧಿ ವೈದ್ಯರುಗಳನ್ನು ಯಾವಾಗ ನೇಮಿಸಲಾಗುವುದು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕಟ್ಟಡ 94ನೇ ಸಾಲಿನಲ್ಲಿ ಪೂರ್ಣವಾಗಿದೆ. ಅದಕ್ಕೆ ತಗುಲಿದ ವೆಚ್ಚ ರೂ. 6,13, 228.00

ಆ) ಮಂಜೂರಾದ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

		ಮಂಜೂರಾದ ಕೆಲಸ ಹುದ್ದೆಗಳು	*ನಿರ್ವಹಿಸುತ್ತಿರುವ ಹುದ್ದೆಗಳು*	*ಖಾಲಿ ಹುದ್ದೆಗಳು*
1)	ವೈದ್ಯಾಧಿಕಾರಿ	1	1	0
2)	ಫಾರ್ಮಸಿಸ್ಟ್	1	1	0
3)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	9	9	0
4)	ಕಿರಿಯ ಆರೋಗ್ಯ ಸಹಾಯಕ	2	1	1
5)	4ನೇ ದರ್ಜೆ ನೌಕರರು	1	1	-